**ಇಂದು ದಿನಾಂಕ : *15.03.2023* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 8 ರಿಂದ 12 ನೇ ಪ್ರತಿವಾದಿ ಪರ ಶ್ರೀ. ಜಿ.ಎಸ್.ಎನ್. ವಕೀಲರಿಂದಃ**

ನನ್ನ ತಂದೆ ಹೆಸರು ಪಿ.ವಸಂತರಾಜೇ ಅರಸ್. ನಮ್ಮ ತಂದೆಗೆ ನಾನು , ಕೃಷ್ಣರಾಜೇ ಅರಸ್ , ಸಂಧ್ಯಾರಾಣಿ ಮೂರು ಜನ ಮಕ್ಕಳು. ನನ್ನ ಅಣ್ಣ ಮೃತರಾಗಿದ್ದಾರೆ. ನನ್ನ ಅಕ್ಕ ಇದ್ದಾರೆ. ಆಕೆಯ ಗಂಡ ಹೆಸರು ರಾಜೇ ಅರಸ್. ರಾಜೇ ಅರಸ್ ರವರ ತಂದೆ ತಾಯಿ ಹೆಸರು ಗೊತ್ತಿಲ್ಲ. ನನ್ನ ಅಕ್ಕನ ಮದುವೆಯ ಸಮಯದಲ್ಲಿ ನನಗೆ 2-2-23 ವರ್ಷ ವಯಸ್ಸಾಗಿತ್ತು. ನಾನು ಮದುವೆಗೆ ಹೋಗಿದ್ದೆ. ಮದುವೆಯ ಸಮಯದಲ್ಲಿ ರಾಜೇ ಅರಸ್ ರವರ ತಂದೆ-ತಾಯಿ ಜೀವಂತವಾಗಿದ್ದರೋ ಇಲ್ಲವೊ ಗೊತ್ತಿಲ್ಲ. ಅವರ ಹೆಸರು ಗೊತ್ತಿಲ್ಲ. ಅವರ ತಂದೆ ರಾಮರಾಜೇ ಅರಸ್ ಮತ್ತು ತಾಯಿ ಸರಸ್ವತಮ್ಮ ಎಂದರೆ ಗೊತ್ತಿಲ್ಲ. ಸರಸ್ವತಮ್ಮ ಯಾರು ಎಂದು ನನ್ನ ತಂದೆಗೆ ಗೊತ್ತಿದೆ ಎಂದರೆ ಸಾಕ್ಷಿ ಅವರಿಗೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮದುವೆ ಮಾತುಕತೆ ನನ್ನ ತಂದೆ ಮಾಡಿರುತ್ತಾರೆ. ಮದುವೆಯ ಮಾತುಕತೆ ವಿಚಾರ ನನ್ನ ತಂದೆಗೆ ಗೊತ್ತು. ಮದುವೆಯನ್ನು ನಮ್ಮ ಮನೆಯಲ್ಲಿ ಆಗಿರುತ್ತದೆ. ಗಂಡು ನಮ್ಮ ಮನೆಯಲ್ಲೆ ವಾಸವಿದ್ದರು. ನನ್ನ ಜೊತೆ ನನ್ನ ಅಕ್ಕ ಸಂಧ್ಯಾರಾಣಿ ಮಾತುಕತೆ ಆಡುವುದಿಲ್ಲ. ಆಸ್ತಿ ವಿಚಾರದಲ್ಲಿ ಮಸ್ತಾಫವಿದೆ. ನನ್ನ ಅಕ್ಕ ನನ್ನ ಮತ್ತು ನನ್ನ ತಂದೆ ನಡುವೆ ಭಾಗಾಂಶಕ್ಕೆ ದಾವೆ ನಂ. 28/2017 ರಂತೆ ಹಾಕಿದ್ದಾರೆ ಎಂದರೆ ಸರಿ.

ದಾವೆಯನ್ನು ¼ ಭಾಗಾಂಶಕ್ಕಾಗಿ ಮಾಡಿದ್ದೇನೆ. ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಭಾಗಾಂಶವಾದಾರೆ ನನಗೆ ತೊಂದರೆ ಇರುವುದಿಲ್ಲ. ನನಗೆ ತಹಸೀಲ್ದಾರ್ ಕಛೇರಿಯಲ್ಲಿ ಕೊಡುವ ಆರ್.ಡಿ ಬಗ್ಗೆ ಗೊತ್ತಿಲ್ಲ. ಸದರಿ ವಂಶವೃಕ್ಷವನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಆರ್.ಡಿ. ವಂಶವೃಕ್ಷವನ್ನು ಸಂಬಂಧ ಪಟ್ಟ ಅಧಿಕಾರಿಗಳು ಸಂಪೂರ್ಣ ಮಾಹಿತಿ ಪಡೆದುಕೊಂಡು ವಂಶವೃಕ್ಷ ಕೊಡುತ್ತಾರೆ ಎಂದರೆ ಸರಿ. ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಕಮಲಾಜಾಮ್ಮಣ್ಣಿ , ಲೀಲಾವತಮ್ಮಣ್ಣಿ ಸರಸ್ವತಮ್ಮಣ್ಣಿ ಮತ್ತು ಜಯಲಕ್ಷ್ಮಿರವರ ಮಕ್ಕಳು ಅಂದರೆ ಪ್ರತಿವಾದಿ 8 ರಿಂದ 12 ರವರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಅವರನ್ನು ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ದಾವೆಯಲ್ಲಿ ತೋರಿಸಿರುವ ಅಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಈ ಕಾರಣಕ್ಕೆ ಒಟ್ಟು ಕುಟುಂಬದ ಎಲ್ಲಾ ಸದಸ್ಯರಿಗೂ ಆಸ್ತಿಯಲ್ಲಿ ಭಾಗ ಇದೆ ಎಂದರೆ ಸರಿ. ಪ್ರತಿವಾದಿ 8 ರಿಂದ 12 ರವರಿಗೆ ಆಸ್ತಿಯಲ್ಲಿ ಭಾಗ

ಇದೆ ಎಂದರೆ ಸರಿಯಲ್ಲ. ಅವರ ಭಾಗ ತಪ್ಪಿಸಲು ನಾನು ಪ್ರತಿವಾದಿ 8 ರಿಂದ 12 ರವರು ದೇವರಾಜೇ ಅರಸ್ ರವರ ಮಕ್ಕಳು ಮತ್ತು ಮೊಮ್ಮಕ್ಕಳಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ 08 ರಿಂದ 12 ರವರು ಪ್ರತಿವಾದಿ 06 ಮತ್ತು 07 ರವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**